## ಅನುವಾದ

### ಪ್ರಸರಣಕ್ಕೆ ಒಳ್ಳೆಯ ಮಾರ್ಗ

'ಹರ್ಷನೀಯಂ' ತಂಡದವರದ್ದು ವಿಶೇಷ ಕಾರ್ಯಕ್ರಮ. ನಮ್ಮಲ್ಲಿ ಸೃಜನಶೀಲ ಸಾಹಿತ್ಯಕ್ಕೆ ಮಣೆ ಹಾಕಿದ್ದೇವೆ. ಆದರೆ, ಅನುವಾದ ಎಂದರೆ ಎಲ್ಲರೂ ತಪ್ಪು ಹುಡುಕುವವರೇ. ನಾನು ಅದಕ್ಕೇ ಅನುವಾದಕರನ್ನು ಸೊಸೆಯರ ತರಹ ಎಂದು ಹೇಳುತ್ತಿರುತ್ತೇನೆ. ಒಲ್ಲದ ಗಂಡನಿಗೆ ಮೊಸರಲ್ಲೂ ಕಲ್ಲು ಎನ್ನುವುದು ಇಂತಹವರ ವಿಷಯದಲ್ಲಿ ಪ್ರಯೋಗವಾಗುತ್ತಲೇ ಇರುತ್ತದೆ. ಅನುವಾದಕರ ವಿಷಯದಲ್ಲಿ ಒಂದು ವಿಸಿಬಿಲಿಟಿ ಹಾಗೂ ಅರಿವು ಇಲ್ಲ.

ನಾನು ಈಗ 'ಮಲೆಗಳಲ್ಲಿ ಮದುಮಗಳು' ಕೃತಿಯನ್ನು ಇಂಗ್ಲಿಷ್‌ಗೆ ಅನುವಾದ ಮಾಡುತ್ತಿರುವೆ. ಆ ಕಾದಂಬರಿಯಲ್ಲಿ ಪ್ರಾಣಿ–ಪಕ್ಷಿಗಳ ಹೆಸರುಗಳು, ಪರಿಸರಕ್ಕೆ ಸಂಬಂಧಿಸಿದ ಸ್ಥಳೀಯ ವಿವರಗಳಿವೆ. ನಾನು ಪರಿಸರವಾದಿಗಳ ಜೊತೆ ಕುಳಿತುಕೊಂಡು ಅಂತಹ ಹೆಸರುಗಳ ಪಟ್ಟಿ ಮಾಡಿಕೊಂಡೆ. ಅದಕ್ಕೆ ಇಂಗ್ಲಿಷ್‌ನಲ್ಲಿ ಯಾವ ಪದಗಳು ಸೂಕ್ತ ಎನ್ನುವ ನಿರ್ಧಾರಕ್ಕೆ ಬರಲು






ಸಮಯ ಬೇಡುವ ಕೆಲಸ. ಅಮೆರಿಕದ ಅನುವಾದಕಿ ಡೈಸಿ ರಾಕ್‌ವೆಲ್ ಎಂಬುವವರಿಗೆ ಮೊದಲಿಗೆ ಅನಿಲ್ ಹಾಗೂ ತಂಡದವರು ಇ–ಮೇಲ್ ಬರೆದರು. ತಮ್ಮ ಪಾಡ್‌ಕಾಸ್ಟ್‌ನ ಜಾಯಮಾನವನ್ನು ವಿವರಿಸಿ, ಒಂದು ಆಹ್ವಾನವಿತ್ತರು. ಅಚ್ಚರಿಯೆಂಬಂತೆ, ಆ ಇ–ಮೇಲ್‌ಗೆ ಪ್ರತಿಕ್ರಿಯೆ ಬಂತು. ಡೈಸಿ ರಾಕ್‌ವೆಲ್ ಜತೆಗಿನ ಮಾತುಕತೆ ಸಾಕಾರಗೊಂಡಿತು. ಹೀಗೆ ವಿಶ್ವ ಸಾಹಿತ್ಯದ ಹಲವು ಅನುವಾದಕರನ್ನು ಹುಡುಕಿ ಹುಡುಕಿ ತಂಡ ಮಾತನಾಡಿಸಲಾರಂಭಿಸಿತು.

ಅನುವಾದಕರ ಹುಡುಕಾಟದಲ್ಲಿ ಕೆಲವು ಪ್ರಕಾಶಕರನ್ನೂ ಅನಿಲ್ ಅವರ ತಂಡ ಸಂಪರ್ಕಿಸಿದೆ. ಈ ಸಂವಹನ ಪ್ರಕ್ರಿಯೆಯಲ್ಲಿ ಡೀಪ್ ವೆಲ್ಲಮ್ ಎಂಬ ಸ್ವತಂತ್ರ ಪ್ರಕಾಶಕರೊಬ್ಬರು ಸಂಪರ್ಕಕ್ಕೆ ಬಂದರು. ರಷ್ಯನ್ ಸಾಹಿತ್ಯವನ್ನು ಅನುವಾದ ಮಾಡಿಸುವ ಆಸಕ್ತಿ ಡೀಪ್ ವೆಲ್ಲಮ್ ಅವರಿಗಿತ್ತು. ಅದಕ್ಕಾಗಿ ಅವರು ಮೊದಲು ಅನುವಾದಕರಿಗೆ ಹುಡುಕಾಡಿದರು. ಆಮೇಲೆ ಆಪ್ತರೊಬ್ಬರು 'ನೀವೇ ಅನುವಾದ ಮಾಡಬಹುದಲ್ಲ' ಎಂದು ಸಲಹೆ ಇತ್ತರು. ಸ್ವತಃ ರಷ್ಯನ್ ಭಾಷೆಯನ್ನು ಬಲ್ಲವರಾಗಿದ್ದ ಡೀಪ್ ವೆಲ್ಲಮ್ ತುಸು ಸಂಕೋಚದಿಂದಲೇ ಮೊದಲು ಈ ಕೆಲಸಕ್ಕೆ ಕೈ ಹಚ್ಚಿದರು. ಕೈ ಪಳಗಿದಂತೆ, ಆತ್ಮವಿಶ್ವಾಸ ಕುದುರಿದಂತೆ ಅನುವಾದದ ಕೆಲಸ ವ್ಯಾಪಕವಾಗುತ್ತಾ ಬಂತು. ಡಲ್ಲಾಸ್‌ನಲ್ಲಿ ಒಂದು ಸರ್ಕಾರೇತರ ಸಂಸ್ಥೆಯನ್ನೇ ಅವರು ಪ್ರಾರಂಭಿಸಿದರು. ಕ್ರಮೇಣ ಅದು ಸ್ವತಂತ್ರ ಪ್ರಕಾಶಕ ಸಂಸ್ಥೆಯಾಗಿ ಛಾಪು ಮೂಡಿಸಿತು. ನೂರಕ್ಕೂ ಹೆಚ್ಚು ಭಾಷೆಗಳಿಂದ ಅನುವಾದಗಳನ್ನು ಮಾಡಿಸಿರುವ